ಎಂ ವಿ ಸಿ ನಂಃ 301/2025
ಪಿ ಡಬ್ಲ್ಯುಃ1

<u>ದಿನಾಂಕಃ**13-02-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**</u>

<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ ವಿ ಎ ವಕೀಲರಿಂದಃ</u>

ನಾನು ಸ್ಕೂಟರ್ ನಿಂದ ಬಿದ್ದಿರುವ ಜಾಗ ಅತ್ಯಂತ ತಿರುವುಗಳಿಂದ ಕೂಡಿದ ಜಾಗ ಇರುತ್ತದೆ ಎಂದರೆ ಸಾಕ್ಷಿ ಅತ್ಯಂತ ತಿರುವು ಇರಲಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಎರಡು ಭಾವಚಿತ್ರಗಳನ್ನು ತೋರಿಸಲಾಗಿ ಸದರಿ ಭಾವಚಿತ್ರದಲ್ಲಿ ಕಾಣುವ ತಿರುವಿನ ಬಳಿ ಬಿದ್ದಿರುತ್ತೇನೆ ಎಂದರೆ ಸರಿ. ಸಾಕ್ಷಿ ಸದರಿ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಆರ್ -1 ಮತ್ತು 2 ಎಂದು ಗುರುತಿಸಲಾಯಿತು. ನಿಪಿ-3 ರ ಅಪರಾಧ ವಿವರ ನಮೂನೆಯಲ್ಲಿ ತೋರಿಸಿದ ಫೋಟೋ ಹಾಗೂ ನಕಾಶೆಯಲ್ಲಿ ಫೋಟೋದಲ್ಲಿ ತಿರುವುಗಳು ಹೊಂದಿದ್ದು ಆದರೆ ನಕಾಶೆಯಲ್ಲಿ ತಿರುವು ತೋರಿಸಿಲ್ಲ ಎಂದರೆ ಸರಿ. ನಾನು ನಿಪಿ-4 ಗಾಯದ ಪ್ರಮಾಣ ಪತ್ರವನ್ನು ಪ್ರಶಮನಿ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ. ನಿಪಿ-4 ರಲ್ಲಿ ಬರೆದ ವಿಚಾರಗಳನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ನಾನು ಮತ್ತು ನನ್ನ ಮಗಳು ಸ್ಕೂಟರ್ ನಿಂದ ಬಿದ್ದಾಗ ಸುಮಾರು 04.00 ರಿಂದ 04.30 ರ ಸಮಯ ಆಗಿತ್ತು. ನಾನು ಅಪಘಾತ ಆದ ನಂತರ ಪ್ರಶಮನಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಪ್ರಶಮನಿ ಆಸ್ಪತ್ರೆಯಲ್ಲಿ ದಾಖಲಾದ ನಂತರ ಅಪಘಾತ ಹೇಗೆ ಆಗಿರುತ್ತದೆ ಎಂಬ ಬ್ಗಗೆ ವೈಧ್ಯರಿಗೆ ಹೇಳಿರುತ್ತೇನೆ.

2. ನಾನು ಪ್ರಶಮನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಕಾಲಕ್ಕೆ ಕೊಪ್ಪ ಪೊಲೀಸ್ ನವರು ಆಸ್ಪತ್ರೆಗೆ ಬಂದಿರುವುದಿಲ್ಲ. ನಾನು ಮತ್ತು ನನ್ನ ಮಗಳು ಪ್ರಶಮನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಕಾಲಕ್ಕೆ ಕೊಪ್ಪ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ ಮತ್ತು ಹೇಳಿಕೆ ಕೊಟ್ಟಿರುವುದಿಲ್ಲ ಸಾಕ್ಷಿ ಮುಂದುವರೆದು ನಾವು ಮಣಿಪಾಲ ಆಸ್ಪತ್ರೆಗೆ ಚಿಕಿತ್ಸೆ ಹೋಗಿದ್ದೆ ಎಂದು ಉತ್ತರಿಸುತ್ತಾರೆ. ನಾವು ಪ್ರಶಮನಿ ಆಸ್ಪತ್ರೆಯಿಂದ ಅಂದಾಜು 06.00 ಸಮಯಕ್ಕೆ ಮಣಿಪಾಲ ಆಸ್ಪತ್ರೆಗೆ ಹೋಗಿರುತ್ತೇವೆ. ಸದರಿ ಪ್ರಶಮನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಕಾಲಕ್ಕೆ ನಾನಾಗಲೀ ಅಥವಾ ನನ್ನ ಸಂಬಂಧಿಕರಾಗಲೀ ಕೊಪ್ಪ ಪೊಲೀಸ್ ಠಾಣೆಗೆ ಅಪಘಾತದ ಬಗ್ಗೆ ಮಾಹಿತಿ ಕೊಟ್ಟಿರುವುದಿಲ್ಲ.

3. ಕೊಪ್ಪದಿಂದ ಬೈರುಕೊಡಿಗೆಗೆ ಮೇಲ್ಪಾಲ್ ರಸ್ತೆಯು ಸುಮಾರು 5-6 ಇಂಚಷ್ಟು ರಸ್ತೆಯಿಂದ ಕೆಳಗೆ ಇರುತ್ತದೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ

ಎಂದು ಉತ್ತರಿಸುತ್ತಾರೆ. ಆ ದಿನ ಸ್ಕೂಟಿಯಲ್ಲಿ ನಾನು ಮತ್ತು ನನ್ನ ಮಗಳು ಇದ್ದೆವು ನಾನು ಸ್ಕೂಟಿಯನ್ನು ಚಾಲನೆ ಮಾಡುತ್ತಿದ್ದೆನು. ದಿನಾಂಕ 07.04.2025 ರಂದು ನಾನು ಎಲೆಕ್ಟ್ರಿಕ್ ಸ್ಕೂಟಿಯನ್ನು ಖರೀದಿ ಮಾಡಿರುತ್ತೇನೆ. ನನಗೆ ಚಾಲನ ಪರವಾನಿಗೆ ಪತ್ರ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ವಾಹನಕ್ಕೆ ಸಂಬಂಧಿಸಿದ ವಿಮಾ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾವು ಸ್ಕೂಟಿಯಲ್ಲಿ ಬಿದ್ದ ಜಾಗದಿಂದ ಕೊರಡಿಹಿತ್ಲು ಆಸ್ಪತ್ರೆ ಒಂದು ಕಿ ಮಿ ದೂರದಲ್ಲಿ ಇರುತ್ತದೆ ಎಂದರೆ ಸಾಕ್ಷಿ 2 ವರೆ ಕಿ ಮಿ ದೂರದಲ್ಲಿ ಇರುತ್ತದೆ ಎಂದು ಉತ್ತರಿಸುತ್ತಾರೆ. ನಾವು ಸ್ಕೂಟರ್ ನಿಂದ ಬಿದ್ದ ಜಾಗದಿಂದ ಪ್ರಶಮನಿ ಆಸ್ಪತ್ರೆ 5-6 ಕಿ ಮಿ ದೂರದಲ್ಲಿ ಇರುತ್ತದೆ. ಪ್ರಶಮನಿ ಆಸ್ಪತ್ರೆಯಿಂದ ಕೊಪ್ಪ ಪೊಲೀಸ್ ಠಾಣೆಗೆ ಒಂದು ಫರ್ಲಾಂಗ್ ದೂರು ಇರುತ್ತದೆ ಎಂದರೆ ಸರಿ.

4. ನಾನು ಸ್ವಂತ ಜಮೀನಿನಲ್ಲಿ ಕೃಷಿ ಕೆಲಸ ಮಾಡುತ್ತೆನೆ. ನನಗೆ ಕೃಷಿಯಿಂದ ವಾರ್ಪಿಕ ಆದಾಯ ಅಂದಾಜು 4-5 ಲಕ್ಷ ರೂಪಾಯಿ ಇರುತ್ತದೆ. ನನಗೆ ವಾರ್ಷಿಕ ಕೃಷಿಯಿಂದ 4-5 ಲಕ್ಷ ಆದಾಯ ಬರುತ್ತದೆ ಎಂಬ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನನಗೆ ವಾರ್ಷಿಕ 4-5 ಲಕ್ಷ ಆದಾಯ ಇರುವ ಬಗ್ಗೆ ನಮ್ಮ ವಕೀಲರಿಗೆ ಹೇಳಿರುವುದಿಲ್ಲ. ನನ್ನ ಸ್ಕೂಟಿಯ ಎಡಭಾಗಕ್ಕೆ ತರಚಿದ ಗುರುತುಗಳು ಇರುತ್ತದೆ. ನನ್ನ ಸ್ಕೂಟಿಯ ಮುಂಭಾಗಕ್ಕೆ ಯಾವುದೇ ಜಖಂ ಆಗಿರುವುದಿಲ್ಲ. ನಾನು ಅಪಘಾತ ಆದ ನಂತರ ರಸ್ತೆಯ ಬಲ ಭಾಗಕ್ಕೆ ಬಿದ್ದಿರುತ್ತೇನೆ. ಆ ರೀತಿ ಬಿದ್ದ ಕಾರಣ ನನ್ನ ಬಲಗಾಲಿಗೆ ಪೆಟ್ಟಾಗಿರುತ್ತದೆ. ನಾನು ನನ್ನ ಮಗಳನ್ನು ಸ್ಕೂಟಿಯಲ್ಲಿ ಕೂರಿಸಿಕೊಂಡು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ರಸ್ತೆಯ ಎಡ್ಜ್ ಗೆ ಹೋಗಿ ಸ್ಕಿಡ್ ಆಗಿ ಬಿದ್ದು ನಾನೆ ಅಪಘಾತ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೇ ಬಂದು ಡಿಕ್ಕಿ ಪಡಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾವು ಸ್ಕೂಟಿಯಿಂದ ಬಿದ್ದಾಗ ಎದುರುದಾರ, ಅವರ ತಾಯಿ ಮತ್ತು ಅಜ್ಜಿ ಕಾರಿನಿಂದ ಇಳಿದು ಬಂದು ನಮ್ಮನ್ನು ವಿಚಾರಿಸಿರುತ್ತಾರೆ ಎಂದರೆ ಸಾಕ್ಷಿ ಅವರೇ ಬಂದು ಡಿಕ್ಕಿ ಪಡಿಸಿದ್ದು ಬೇರೆ ಜನರು ಬಂದು ವಿಚಾರಿಸಿರುತ್ತಾರೆ ಎಂದು ಉತ್ತರಿಸುತ್ತಾರೆ.

5 . ನಾನು ಆ ದಿನ ಚಾಲಾಯಿಸಿಕೊಂಡು ಹೋಗುತ್ತಿದ್ದ ಸ್ಕೂಟಿ ರಸ್ತೆಯ ಅಂಚಿನಲ್ಲಿ ಬಿದ್ದಿತ್ತು ಎಂದರೆ ಸರಿಯಲ್ಲ. ನನ್ನ ಪ್ರಕಾರ ಕಾರು ಚಾಲಕ ನೇರ ನೇರವಾಗಿ

ಬಂದು ಡಿಕ್ಕಿ ಪಡಿಸಿರುತ್ತಾರೆ. ಎದುರುದಾರ ನೇರ ನೇರವಾಗಿ ಡಿಕ್ಕಿ ಪಡಿಸಿದ್ದರೆ ನಮ್ಮ ಸ್ಕೂಟಿ ಹಾಗೂ ನಮಗೆ ಬೇರೆ ಬೇರೆ ರೀತಿ ಗಾಯಗಳು ಉಂಟಾಗುತ್ತಿದ್ದವು ಎಂದರೆ ಸರಿಯಲ್ಲ. ಈ ಅರ್ಜಿ ಸಲ್ಲಿಸುವಾಗ ನಮ್ಮ ವಕೀಲರಿಗೆ ನಾನೆ ಮಾಹಿತಿ ಕೊಟ್ಟಿರುತ್ತೇನೆ. ನನಗೆ ಇಂಗ್ಲೀಷ್ ಓದಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾವು ಪ್ರಶಮನಿ ಆಸ್ಪತ್ರೆಯಿಂದ ನಮ್ಮ ಅಣ್ಣನ ಕಾರಿನಲ್ಲಿ ಮಣಿಪಾಲ ಆಸ್ಪತ್ರೆಗೆ ಹೋಗಿರುತ್ತೇವೆ. ನಾನು ಪ್ರಶಮನಿ ಆಸ್ಪತ್ರೆಯಲ್ಲಿ ನನ್ನ ವೈಧ್ಯಕೀಯ ವೆಚ್ಚಕ್ಕೆ ಸುಮಾರು ರೂ.3 ಸಾವಿರದಷ್ಟು ಖರ್ಚು ಆಗಿರುತ್ತದೆ. ನಾನು ಪ್ರಶಮನಿ ಆಸ್ಪತ್ರೆಯಲ್ಲಿ ನನ್ನವೈಧ್ಯಕೀಯ ವೆಚ್ಚಕ್ಕೆ ರೂ. 3 ಸಾವಿರ ಹಣ ಖರ್ಚು ಆದ ಬಗ್ಗೆ ದಾಖಲೆಯನ್ನು ಕೊಟ್ಟಿರುತ್ತೇನೆ. ನನ್ನ ಸ್ಕೂಟಿಯ ರಿಪೇರಿಗೆ ಸುಮಾರು 20-22 ಸಾವಿರ ಖರ್ಚು ಆಗಿರುತ್ತದೆ. ಆ ಬಗ್ಗೆ ಬಿಲ್ಲು ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಸದರಿ ವಾಹನದ ರಿಪೇರಿ ವಿಮೆಯನ್ನು ಪಡೆದುಕೊಂಡಿರುವುದಿಲ್ಲ.

6. ನಾನು ಮಣಿಪಾಲ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಆಗುವ ಕಾಲಕ್ಕೆ 3 ಜನರು ಇದ್ದು ಅವರಲ್ಲಿ ಶಸ್ತ್ರ ಚಿಕಿತ್ಸೆ ಆದ ನಂತರ ನನ್ನ ಹೆಂಡತಿ ನನ್ನ ಜೊತೆ ಇದ್ದು ಉಳಿದವರು ಬಂದು ಹೋಗಿರುತ್ತಾರೆ. ನಮ್ಮ ಮನೆಯವರು ಗೃಹಿಣಿ ಹಾಗೂ ಕೃಷಿ ಕೆಲಸ ಮಾಡುತ್ತಾರೆ. ಸುಮಂತ್ ಎನ್ನುವವರು ನನ್ನ ಅಣ್ಣನ ಮಗ ಇರುತ್ತಾರೆ. ಸುಮಂತ್ ಇವನು ನಾನು ಸ್ಕೂಟಿಯಿಂದ ಬಿದ್ದುದ್ದನ್ನು ನೋಡಿರುವುದಿಲ್ಲ ಆದರೆ ನಂತರ ಬಂದಿರುತ್ತಾರೆ. ನನ್ನ ಅಣ್ಣನ ಮಗನಿಗೆ ದೂರು ಕೊಡುವಂತೆ ನಾನು ಹೇಳಿರುತ್ತೇನೆ. ದಿನಾಂಕ 08.05.2025 ರಿಂದು ದೂರು ಕೊಡುವಂತೆ ಹೇಳಿರುತ್ತೇನೆ. ನಾವು ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗುವ ಕಾಲಕ್ಕೆ ಅಪಘಾತದಿಂದ ಆದ ಗಾಯಗಳು ಎಂದ ವೈಧ್ಯರಿಗೆ ಹೇಳಿರುತ್ತೇನೆ. ಅಲ್ಲಿನ ವೈಧ್ಯರು ಸಂಬಂಧಿಸಿದ ಪೊಲೀಸ್ ಠಾಣೆಗೆ ಮಾಹಿತಿ ಕಳುಹಿಸಿರುತ್ತಾರೋ ಅಥವಾ ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಮಣಿಪಾಲ ಆಸ್ಪತ್ರೆಯಲ್ಲಿ ಇರುವಷ್ಟು ಅವಧಿಯಲ್ಲಿ ಯಾವ ಪೊಲೀಸರು ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

7. ನಾನು ಸ್ಕೂಟಿಯಿಂದ ಸ್ಕಿಡ್ ಆಗಿ ಬಿದ್ದಿರುವ ಕಾರಣ ಪ್ರಶಮನಿ ಆಸ್ಪತ್ರೆಯಲ್ಲಿ ಮತ್ತು ಮಣಿಪಾಲ ಆಸ್ಪತ್ರೆಯಲ್ಲಿ ಪೊಲೀಸರಿಗೆ ಯಾವುದೇ ಮಾಹಿತಿ ಕೊಟ್ಟಿರುವುದಿಲ್ಲ

ಎಂದರೆ ಸಾಕ್ಷಿ ನಾನು ಸ್ಕಿಡ್ ಆಗಿ ಬಿದ್ದಿಲ್ಲ ಅಪಘಾತ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ನನ್ನ ಕಾಲಿಗೆ ಶಸ್ತ್ರ ಚಿಕಿತ್ಸೆ ಆದ ನಂತರ ವೈಧ್ಯರು ಬಿಲ್ ಕಟ್ಟಬೇಕು ಎಂದು ಹೇಳಿದ ಕಾರಣ ನಾನು ಸುಮಂತ್ ಇವರ ಮುಖಾಂತರ ಅಪಘಾತ ಆಗಿರುತ್ತದೆ ಎಂದು ಸುಳ್ಳು ದೂರು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ್ದು ಅದರಲ್ಲಿ ಬರೆದ ವಿಚಾರಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ನಾನು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ಬಗ್ಗೆ ಡಿಸ್ಚಾರ್ಜ್ ಸಮ್ಮರಿಯನ್ನು ಕೊಟ್ಟಿರುವುದಿಲ್ಲ. ನಿಪಿ- 8 ರಿಂದ 22 ದಾಖಲೆಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ನಾನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೇ ಎಂದರೆ ಸರಿಯಲ್ಲ. ನಿಪಿ-8 ರಿಂದ 22 ರಲ್ಲಿ ಹಣ ಸ್ವೀಕರಿಸಿದ ಬಗ್ಗೆ ಆಸ್ಪತ್ರೆಯವರ ಸೀಲು ಇರುವುದಿಲ್ಲ ಎಂದರೆ ಸರಿಯಲ್ಲ.

8. ನಾನು ಮಣಿಪಾಲ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ನಂತರ ಮೂರು ನಾಲ್ಕು ಬಾರಿ ಆಸ್ಪತ್ರೆಗೆ ಹೋಗಿ ಬಂದಿರುತ್ತೇನೆ. ನಾನು ಈ ರೀತಿ ಮೂರು ನಾಲ್ಕು ಬಾರಿ ಆಸ್ಪತ್ರೆಗೆ ಹೋಗಿ ಬಂದ ಸಂಬಂಧ ದಾಖಲೆಯನ್ನು ಹಾಜಾರುಪಡಿಸುತ್ತೇನೆ. ನನಗೆ ಮೇ ತಿಂಗಳಲ್ಲಿ ವೈಧ್ಯರು ಬರಲು ಹೇಳಿ ಅಲ್ಲಿಯವರೆಗೆ ವಿಶ್ರಾಂತಿ ಪಡೆಯುವಂತೆ ಹೇಳಿರುತ್ತಾರೆ. ನನ್ನ ಗಾಯ ಸಂಪೂರ್ಣವಾಗಿವಾಸಿ ಯಾಗಿರುತ್ತದೆ ಎಂದರೆ ಸಾಕ್ಷಿ ಮೇಲೆ ವಾಸಿಯಾಗಿರುತ್ತದೆ ಆದರೆ ಒಳಗೆ ರಾಡ್ ಇರುತ್ತದೆ ಎಂದು ಉತ್ತರಿಸುತ್ತಾರೆ. ನನ್ನ ದೈನಂದಿನ ಕೆಲಸಗಳನ್ನು ಮಾಡಿಕೊಳ್ಳಲು ನನಗೆ ತೊಂದರೆ ಇರುವುದಿಲ್ಲ ಎಂದರೆ ಸರಿ. ನನ್ನ ಮುಂದಿನ ಚಿಕಿತ್ಸೆಗೆ ಎಷ್ಟು ಹಣ ಖರ್ಚು ಆಗುತ್ತದೆ ಎಂಬ ಬಗ್ಗೆ ವೈಧ್ಯರು ನನಗೆ ಹೇಳಿರುವುದಿಲ್ಲ. ನನಗೆ ಅಪಘಾತ ಪೂರ್ವದಲ್ಲಿ ಬಿ ಪಿ ಮತ್ತು ಶುಗರ್ ಇತ್ತು ಎಂದರೆ ಸರಿಯಲ್ಲ. ನಾನು ಹೇಳುವ ರೀತಿ ಯಾವುದೇ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವೈಯಕ್ತಿಕ ನಿರ್ಲಕ್ಷ್ಯತನದಿಂದ ಸ್ಕೂಟಿಯಿಂದ ಬಿದ್ದು ಗಾಯ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ಎದುರುದಾರರ ವಾಹನ ಯಾವುದೇ ರೀತಿಯಲ್ಲಿ ಡಿಕ್ಕಿ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರ ವನ್ನು ಪಡೆಯುವ ಸಲುವಾಗಿ ಸುಳ್ಳು ದೂರನ್ನು ಸುಮಂತ್ ಮೂಲಕ ನೀಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತ ಘಟನೆಗೂ ಮತ್ತು ಎದುರುದಾರರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು

ಎಂ ವಿ ಸಿ ನಂಃ 301/2025
ಪಿ ಡಬ್ಲ್ಯುಃ1

ಎದುರುದಾರರಿಂದ ಪರಿಹಾರ ಪಡೆಯಲು ಅರ್ಹ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ನನ್ನ ಆದಾಯ ಮತ್ತು ವೈಧ್ಯಕೀಯ ವೆಚ್ಚವನ್ನು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ
ನ.ರಾ.ಪುರ, ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ

ಎಂ ವಿ ಸಿ ನಂಃ 301/2025
ಪಿ ಡಬ್ಲ್ಯುಃ1